ಶ್ರೀ ಜಗದೀಶ್ ಶೆಟ್ಟರ್ :— ವಿಧೇಯಕಗಳನ್ನೂ ಸಹ ಬೇರೆ ಮಂತ್ರಿಗಳ ಪರವಾಗಿ ಮಂಡಿಸುವುದು ಸರಿಯೇ?

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಇದು ತಮ್ಮ ರೂಲಿಂಗ್‌ಗೆ ವಿರುದ್ಧವಾಗಿದೆ. ಇದೇ ಅಧಿವೇಶನದಲ್ಲಿ ತಾವೇ ಕೊಟ್ಟಂಥ ರೂಲಿಂಗ್‌ಗೆ ತಾವೇ ವಿರುದ್ಧವಾಗಬಾರದು. ತಾವು ಒಳ್ಳೆಯ ರೂಲಿಂಗ್ ಕೊಟ್ಟಿದ್ದೀರಿ. ಅದೇ ಉಳಿದುಕೊಂಡರೆ ಒಳ್ಳೆಯದು. ಯಾವ ಮಂತ್ರಿಗಳು ಸದನದಲ್ಲಿ ಹಾಜರಿ ಇರುತ್ತಾರೋ, ಆದೇ ಮಂತ್ರಿಗಳು ಸಂಬಂಧಪಟ್ಟ ವಿಧೇಯಕವನ್ನು ಮಂಡಿಸುವುದೊಳ್ಳೆಯದು.

ಅಧ್ಯಕ್ಷರು :— ಸಭೆಯ ಮುಂದಿಡಲಾದ ಹಾಗದ ಪತ್ರಗಳ ಮಂಡನೆಗೆ ಸಂಬಂಧಪಟ್ಟಂತೆ ನಾನು ರೂಲಿಂಗ್ ಕೊಟ್ಟಿದ್ದು, ಬಿಲ್ ಇಂಟ್ರೊಡಕ್ಷನ್‌ಗೆ ರೂಲಿಂಗ್ ಕೊಟ್ಟಿಲ್ಲ. It is a joint responsibility. Ministrty is a joint responsibility. ತಾವು ಒಪ್ಪುತ್ತೀರಾ? ಮಾಡಲಿ ಬಿಡಿ. ಇನ್ನು ಮುಂದೆ ಹೀಗಾಗದ ಹಾಗೆ ನೋಡಿಕೊಳ್ಳಿ.

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) :— ಅವರು ಆ ಸದನದಲ್ಲಿದ್ದಾರೆ.

ಅಧ್ಯಕ್ಷರು :— ಇವತ್ತು ಎರಡೂ ಸದನಗಳು ಒಂದೇ ಸಮಯದಲ್ಲಿ ಪ್ರಾರಂಭವಾಗುತ್ತಿವೆ. ಮೊದಲು ನಮಗೂ, ಅವರಿಗೂ ಒಂದು ಗಂಟೆ ಡಿಲೇ ಇರುತ್ತಿತ್ತು. ಆ ವ್ಯತ್ಯಾಸವಾಗಿದ್ದನ್ನು ಸೆಟ್ ರೈಟ್ ಮಾಡಬೇಕು. Is he (Hon.Minister) busy in that House? ಸದನದ ಪ್ರಾರಂಭಿಕ ಸಮಯವನ್ನು ಅರ್ಧ ಗಂಟೆ ಬದಲಾವಣೆ ಮಾಡಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ :— ನಿನ್ನೆ ಈ ಸದನದಲ್ಲಿ ಚರ್ಚೆಯಿದ್ದಾಗ, ಆ ಸದನದಲ್ಲಿ ಪ್ರಶ್ನೋತ್ತರವಿತ್ತು. ಮಧ್ಯಾಹ್ನ ಅಲ್ಲಿ ಚರ್ಚೆ ಇದ್ದಾಗ, ಇಲ್ಲಿ ಪ್ರಶ್ನೋತ್ತರವಿತ್ತು.

(2) ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ ವಿಧೇಯಕ 2000
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

``2000 ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ** 11

(iii) ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕ, 2000 (ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— 2000 ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

``2000 ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— 2000 ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ** 11I

(ಬಿ) ಪರ್ಯಾಲೋಚನಾ ಪ್ರಸ್ತಾವ

(i) ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ - 2000

ಅಧ್ಯಕ್ಷರು :— ನಿನ್ನೆ ಮಾನ್ಯ ಕೆ.ಹೆಚ್ ಹನುಮೇಗೌಡರು ಪ್ರಾರಂಭಿಸಿದ್ದರು. ಈಗ ಮುಂದುವರಿಸಿ.